**ಸಿ.ಸಿ. ನಂಃ 1027/2025**

**ಪಿ.ಡಬ್ಲ್ಯೂಃ 1**

**ದಿನಾಂಕ 17.02.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ: ಶ್ರೀ.ಎಮ್.ಎಸ್. ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ವೃತ್ತಿಯಲ್ಲಿ ರೈತನಾಗಿರುತ್ತೇನೆ. ನನಗೆ ಸುಮಾರು 2 ವರ್ಷಗಳಿಂದ ಆರೋಪಿಯ ಪರಿಚಯವಿದೆ. ನನ್ನ ತಂದೆಯು ಹೊಸಅಗ್ರಹಾರ ಪ್ರೌಢಶಾಲೆಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದು, ನನ್ನ ತಂದೆಯವರ ಮುಖಾಂತರ ನನಗೆ ಆರೋಪಿಯ ಪರಿಚಯವಾಗಿರುತ್ತದೆ.

2. ದಿನಾಂಕ 23.02.2025 ರಂದು ಆರೋಪಿಯು ನನ್ನೊಂದಿಗೆ ಸಾಲವನ್ನು ಕೇಳಿರುತ್ತಾರೆ. ದಿನಾಂಕ 01.04.2025 ರಂದು ನಾನು ಆರೋಪಿಗೆ ಸಾಲವನ್ನು ಕೊಟ್ಟಿರುತ್ತೇನೆ. ತಮ್ಮ ಮನೆಯನ್ನು ಕಟ್ಟುವ ಉದ್ದೇಶಕ್ಕಾಗಿ ಹಾಗೂ ಇತರರಲ್ಲಿ ಮಾಡಿದ್ದ ಸಾಲವನ್ನು ತೀರಿಸುವ ಉದ್ದೇಶಕ್ಕಾಗಿ ಆರೋಪಿಯು ನನ್ನಿಂದ ಸಾಲವನ್ನು ಪಡೆದಿರುತ್ತಾರೆ.

3. ಆರೋಪಿಯು ಸಾಲದ ಹಣವನ್ನು ನನ್ನ ಮನೆಯಲ್ಲಿ ಪಡೆದಿರುತ್ತಾರೆ. ಆರೋಪಿಯು ಬೀರುವಳ್ಳಿ ಗ್ರಾಮದ ಬಾಬು ರಾಜೇಂದ್ರ ಪ್ರಸಾದ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸದರಿ ಶಾಲೆಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿರುವ ಅನುಸೂಯ ಎನ್ನುವವರ ಪರಿಚಯ ನನಗೆ ಇಲ್ಲ. ಸದರಿ ಅನುಸೂಯ ಮತ್ತು ನನ್ನ ಹೆಂಡತಿ ನೇತ್ರಾವತಿ ಇವರಿಬ್ಬರು ಪರಿಚಯಸ್ಥರು ಎಂದರೆ ಸರಿ. ಸದರಿ ಅನುಸೂಯರವರ ಮೂಲಕ ಆರೋಪಿಯು ನನ್ನಿಂದ ಸಾಲದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ನಾನು ಆರೋಪಿಗೆ ಸಾಲದ ಹಣವನ್ನು ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಸೈಟ್ ಖರೀದಿಸುವ ಉದ್ದೇಶದಿಂದ ಹಣವನ್ನು ಕೂಡಿಟ್ಟಿದ್ದೆ. ಆರೋಪಿಯು ಒಂದು ತಿಂಗಳಲ್ಲಿಯೇ ಹಣವನ್ನು ನನಗೆ ಮರುಪಾವತಿಸುವುದಾಗಿ ಹೇಳಿದ ಕಾರಣ ನಾನು ಸೈಟ್ ಖರೀದಿಸುವ ಉದ್ದೇಶಕ್ಕಾಗಿ ಕೂಡಿಟ್ಟ ಹಣವನ್ನು ಆರೋಪಿಗೆ ಸಾಲವಾಗಿ ಕೊಟ್ಟಿರುತ್ತೇನೆ. ನನ್ನ ಬಳಿ 7 ಲಕ್ಷ ರೂಪಾಯಿ ಹಣವಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

5. ನಾನು ಮತ್ತು ನನ್ನ ತಂದೆ ಒಂದೇ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿ. ನನಗೆ ಬಿ.ಪಿ.ಎಲ್ ಪಡಿತರ ಚೀಟಿ ಇದೆ. 7 ಲಕ್ಷ ರೂಪಾಯಿ ಹಣ ಇದ್ದವರಿಗೆ ಸರಕಾರಿದವರು ಬಿ.ಪಿ.ಎಲ್ ಪಡಿತರ ಚೀಟಿಯನ್ನು ಕೊಡುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ವ್ಯವಸಾಯ ಮಾಡಿ ಬಂದ ಆದಾಯವನ್ನು ಹಾಗೂ ನನ್ನ ತಂದೆಯವರಿಗೆ ಬಂದ ಪಿಂಚಣಿ ಹಣವನ್ನು ಕೂಡಿಟ್ಟು ಬಂದ ಆದಾಯವನ್ನು ನಾವು ನಿವೇಶನ ಖರೀದಿಸಲು ಕೂಡಿಟ್ಟೇದೇವು ಎಂದು ನುಡಿದಿರುತ್ತಾರೆ. ನಾನು ಆರೋಪಿಗೆ 7 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು.,ಕೆ.ಆರ್.ನಗರ**